ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

(ಅ) ನಾಲ್ಕು. ಮುಂದಿನ ನೇಮಕಾತಿ ಸಮಯದಲ್ಲಿ ಭರ್ತಿ ಮಾಡಲಾಗುವುದು.

(ಆ) ರಾಷ್ಟ್ರೀಕರಣವಾಗಿರುವ ಮಾರ್ಗಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಯಾಣಿಕರ ಬೇಡಿಕೆಗಳಿಗೆ ಅನುಗುಣವಾಗಿ ವಾಹನಗಳನ್ನು ಓಡಿಸುತ್ತಿದೆ.

(ಇ) ಮಾನ್ಯ ಸಾರಿಗೆ ಸಚಿವರು ದಿನಾಂಕ 21-2-1987ರಂದು ಚಿಕ್ಕಮಗಳೂರಿಗೆ ಭೇಟಿ ಇತ್ತಾಗ, ಚಿಕ್ಕಮಗಳೂರು ಉಡುಪಿ ಮಾರ್ಗದಲ್ಲಿ ನೇರ ವಾಹನವನ್ನು ಓಡಿಸುವ ಬಗ್ಗೆ ಮನವಿಯೊಂದು ಬಂದಿದ್ದು, ಈ ಬಗ್ಗೆ ಆಶ್ವಾಸನೆ ನೀಡಿಲ್ಲ.

ಶ್ರೀ ವೀರಣ್ಣ.—ಅಲ್ಲಿರತಕ್ಕಂತಹ ಸಾರ್ವಜನಿಕರು ಚಿಕ್ಕಮಗಳೂರಿನಿಂದ ನೇರವಾಗಿ ಉಡುಪಿಗೆ ಬಸ್ ಸೌಕರ್ಯವನ್ನು ಕಲ್ಪಿಸಬೇಕೆಂದು ಕೇಳಿದ್ದರು ನಾನು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅದರ ಮಾರ್ಗವನ್ನು ಸರ್ವೆ ಮಾಡಿಸುತ್ತೇನೆಂದು ಹೇಳಿದ್ದೇನೆ. ಅದರ ತೀರ್ಮಾನಕ್ಕೆ ಹೆಚ್ಚು ಇದ್ದರೆ ಅದಷ್ಟು ಬೇಗ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ ಈಗಾಗಲೇ ಅನೇಕ ಬಸ್ಸುಗಳು ಓಡಾಡುತ್ತಿವೆ ಇನ್ನೂ ಹೆಚ್ಚು ಒತ್ತಡ ಇದ್ದರೆ ಅದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಐ. ಬಿ. ಶಂಕರ್.—ಮಾನ್ಯ ಸಚಿವರು ಈಗ ತಾನೆ ಹೇಳಿದರಂತೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು. ತಾವು ಭರವಸೆ ಕೊಟ್ಟಿದ್ದೀರಿ ಅದು ನನ್ನ ಗಮನದಲ್ಲಿಯೂ ಕೂಡ ಇದೆ. ಆ ಬಸ್‌ನಿಂದಾಗಿ ತಮ್ಮ ಇಲಾಖೆಗೆ ಲಾಸ್ ಆಗುವುದಾದರೆ ಅದನ್ನು ಜನತೆ ಕೈಯಿಂದ ಕಟ್ಟಿ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ನಮ್ಮಲ್ಲಿ ಮಣಿಪಾಲ್‌ಗೆ ಹೋಗುವವರು ಬಹಳ ಮಂದಿ ಇದ್ದಾರೆ ಅಲ್ಲಿ ಉತ್ತಮವಾದ ಆಸ್ಪತ್ರೆ ಇರುವುದರಿಂದ ಅಲ್ಲಿಗೆ ನೇರವಾದ ಬಸ್ ಮಾಡುವುದರಿಂದ ಅನೇಕ ಜನರ ಪ್ರಾಣವನ್ನು ತಾವು ಉಳಿಸಬಹುದು. ಇದನ್ನು ಮಂಜೂರು ಮಾಡುವುದಕ್ಕೆ ಕೂಡಲೇ ಆದೇಶ ಕೊಡಬೇಕೆಂದು ಅಧ್ಯಕ್ಷರ ಮುಖಾಂತರ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವೀರಣ್ಣ.—ಶಂಕರ ಅಭಿಪ್ರಾಯವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಇನ್ನು ಒಂದು ತಿಂಗಳಲ್ಲಿ ಚಿಕ್ಕಮಗಳೂರಿನಿಂದ ಉಡುಪಿಗೆ ಬಸ್ ಸೌಕರ್ಯವನ್ನು ಒದಗಿಸಲಿಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮಗಳು

೩೨೪. ಶ್ರೀ ಕೆ. ಎಚ್. ಪಾಟೀಲ್ (ಗದಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಂಗಳೂರಿನಲ್ಲಿರುವ ದೂರದರ್ಶನ ಕೇಂದ್ರದಿಂದ ಪ್ರಸಾರವಾಗುವ ದಿನನಿತ್ಯದ ಕನ್ನಡ ಕಾರ್ಯಕ್ರಮಗಳನ್ನು ರಾಜ್ಯದ ಇತರೆಡೆಗಳಲ್ಲಿರುವ ಟ್ರಾನ್ಸ್‌ಮಿಟರ್‌ಗಳಲ್ಲಿ ಮಾಡಿ ಬರುವಂತೆ ಮೊದಲು ರಾಜ್ಯ ಸರಕಾರದವರು ಕೇಂದ್ರ ಸರ್ಕಾರದವರಿಗೆ ಸಲಹೆ ಮಾಡಿದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಶ್ರೀ ಕೆ. ಹೆಚ್. ಪಾಟೀಲ್.—ಈ ಬಗ್ಗೆ ಆಪರಿಂದ ಏನು ಉತ್ತರ ಬಂದಿದೆ, ಇದರ ಬಗ್ಗೆ ಏನು ಪ್ರಯತ್ನ ಪಡೆದಿದೆ ಅದು ಬೇಗ ಆಗುವ ಸಂಭವನೀಯವಾದರೂ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಸಂಬಂಧಪಟ್ಟ ಕೇಂದ್ರ ಸರಕಾರದ ಮಂತ್ರಿಗಳಿಗೆ ಕರ್ನಾಟಕದಲ್ಲಿ ಎರಡನೇ ಚಾನಲ್ ಅನ್ನು ಪ್ರಾರಂಭ ಮಾಡಬೇಕೆಂದು ಪತ್ರ ಬರೆದಿದ್ದೇನೆ. ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಎರಡನೇ ಚಾನಲ್ ಅನ್ನು ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಕ್ಕೆ ಕೊಡಲಿಕ್ಕೆ ಈಗಾಗಲೇ ಒಪ್ಪಿದ್ದಾರೆ. ನಾನು ಕೇಳಿದಂಥದ್ದು ಎರಡನೇ ಚಾನಲ್ ಅಲ್ಲ. ನಾವು ಕೇಳಿದ್ದು ಏನೆಂದರೆ ರಾಜ್ಯ ಸರಕಾರಕ್ಕೆ ಪ್ರತ್ಯೇಕವಾದ ಚಾನಲ್ ಅನ್ನು ಕೊಟ್ಟರೆ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಮನೋರಂಜನಾ ಕಾರ್ಯಕ್ರಮಗಳನ್ನು ಇಲ್ಲಿಯ ಕಲೆಗಾರರ ಇಲ್ಲಿಯ ಬರಹಗಾರರ, ಇಲ್ಲಿಯ ಆರ್ಟಿಸ್ಟ್

ಮುಖ್ಯಾಂತರವಾಗಿ ವಿಸರ್ಜಿಸಲಿಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದೇನೆ. ಈಗ ಅವರು ತೀರ್ಮಾನ ಮಾಡಿರತಕ್ಕಂಥಾದ್ದು ಮಹಾರಾಷ್ಟ್ರ, ಆಂಧ್ರಕ್ಕೆ ಸಂಬಂಧಪಟ್ಟಂತೆ. ಕೇಂದ್ರ ಸರಕಾರದವರೇ ಸ್ಥಾನಿಕ ಭಾಷೆಯಲ್ಲಿ ಕಾರ್ಯಕ್ರಮಗಳನ್ನು ಪ್ರತ್ಯೇಕವಾಗಿ ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಕರ್ನಾಟಕದ ಬಗ್ಗೆ ಅವರು ಹೇಳಿದ ಆಶ್ವಾಸನೆ ಏನೆಂದರೆ ಬರುವ ವರ್ಷದವರೆಗೆ ಇದು ಸಾಧ್ಯವಾಗಬಹುದೆಂದು. ಇದಕ್ಕಿಂತ ಹೆಚ್ಚಿನ ಮಾಹಿತಿ ನನ್ನಲ್ಲಿ ಇಲ್ಲ.

ಶ್ರೀ ಎಂ. ರಘುಪತಿ.—ಬೆಂಗಳೂರು ದೂರದರ್ಶನವು ಏನು ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ ಅದರ ಗುಣಮಟ್ಟ ಬಹಳ ಕೀಳು ಮಟ್ಟದಲ್ಲಿದೆ ಜನರ ಅಭಿರುಚಿಯನ್ನು, ಜನರಲ್ಲಿ ಇಂಟರೆಸ್ಟ್ ಅನ್ನು ಯಾವ ರೀತಿ ಹುಟ್ಟಿಸಬೇಕೋ ಅದು ಸಾಧ್ಯವಾಗುತ್ತಿಲ್ಲ. ಈ ವಿಷಯದಲ್ಲಿ ಕೇಂದ್ರ ಸರಕಾರಕ್ಕೆ ಪತ್ರ ಬರೆಯುತ್ತೀರಾ ? ಎಂದು ಮಾನ್ಯ ಮಂಖ್ಯಿ ಮಂತ್ರಿಗಳನ್ನು ತಮ್ಮ ಮೂಲಕ ಕೇಳಲು ಇಚ್ಛಿಪಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಕೇಂದ್ರ ಸರಕಾರಕ್ಕೆ ನಾನು ಬರೆಯಂವುದಕ್ಕಿಂತಲೂ ಸಾರ್ವಜನಿಕರು ಬರೆದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಸಣ್ಣ ಉಳಿತಾಯದ ಬಗ್ಗೆ

೩೮೬ (ಬಿ) ಶ್ರೀ ಜಿ. ರಾಜುಗೌಡ, (ಹನೂರು).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಹಾಗೂ ಬಂದೀಖಾನೆ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದ ಸಣ್ಣ ಉಳಿತಾಯದ ಬಗ್ಗೆ ಹೊಂದಿರುವ ನಿವ್ವಳ ಗುರಿ ಎಷ್ಟು.

ಆ) ಕೇಂದ್ರ ಸರ್ಕಾರದವರು ನಿಗದಿ ಮಾಡಿದ ಗುರಿಗಿಂತ ಹೆಚ್ಚಾಗಿ ಯಾವ ಯಾವ ರಾಜ್ಯಗಳು ಸಣ್ಣ ಉಳಿತಾಯದ ಗುರಿಯನ್ನು ಸಾಧಿಸಿವೆ.

ಇ) ಕೇಂದ್ರವು ಸಂಗ್ರಹಣೆಯಲ್ಲಿ ಶೇಕಡಾ ಎರಡರಷ್ಟನ್ನು ಅನುದಾನವಾಗಿ ನೀಡಿದರೆ ರಾಜ್ಯ ಸರ್ಕಾರಕ್ಕೆ ಎಷ್ಟು ಹಣ ದೊರಕುತ್ತದೆ?

ಶ್ರೀ ವೀರಣ್ಣ (ಸಣ್ಣ ಉಳಿತಾಯ, ಸಾರಿಗೆ ಮತ್ತು ಬಂದೀಖಾನೆಯ ರಾಜ್ಯಸಚಿವರು).—

ಅ) ೧೯೮೫-೮೬ನೇ ಸಾಲಿಗೆ ರೂ. ೨೧೧ ಕೋಟಿ, ೧೯೮೬-೮೭ ನೇ ಸಾಲಿಗೆ ರೂ. ೩೭೫ ಕೋಟಿ.

ಆ) (೧೯೮೫-೮೬ನೇ ಸಾಲಿನಲ್ಲಿ) ಕರ್ನಾಟಕ. ಪಂಜಾಬ್‌ರಾಷ್ಟ್ರ ಮತ್ತು ಬಿಹಾರ.

ಇ) ಕೇಂದ್ರವು ರಾಜ್ಯ ಸರ್ಕಾರಕ್ಕೆ ಸಣ್ಣ ಉಳಿತಾಯದ ಸಂಗ್ರಹಣೆ ಬಗ್ಗೆ ಅನುದಾನ ನೀಡಿರುವುದಿಲ್ಲ ನಿವ್ವಳ ಸಂಗ್ರಹಣೆಯು ಮೂರರಲ್ಲಿ ಎರಡು ಪಾಲಿನಷ್ಟು ದೀರ್ಘಾವಧಿ ಸಾಲವಾಗಿ ನೀಡುತ್ತದೆ.

ಶ್ರೀ ಜಿ. ರಾಜುಗೌಡ.—೧೯೫೫-೮೬ ರಲ್ಲಿ ಸಣ್ಣ ಉಳಿತಾಯದಿಂದ ರಾಜ್ಯಕ್ಕೆ ಎಷ್ಟು ಪಾಲು ಬಂದಿದೆ? ಕೇಂದ್ರ ಸರ್ಕಾರ ನಿಗಧಿ ಮಾಡಿದ್ದಕ್ಕಿಂತ ಹೆಚ್ಚಿಗೆ ತಾವು ಸಣ್ಣ ಉಳಿತಾಯದಲ್ಲಿ ಸಾಧನೆ ಮಾಡಿರುವುದರಿಂದ ರಾಜ್ಯಕ್ಕೆ ವಿಶೇಷವಾದ ಧನ ಕೊಡಬೇಕೆಂದು ತಾವು ಏನಾದರೂ ಕೇಳಿಕೊಂಡಿದ್ದೀರಾ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಸಣ್ಣ ಉಳಿತಾಯದಲ್ಲಿ ಈ ಗ್ಯಾಸ್ ಮತ್ತು ನೆಟ್ ಮಧ್ಯೆ ಇರತಕ್ಕಂಥ ಶೇಕಡವಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿದೆ. ಇದಕ್ಕೆ ೮೫-೮೬ ರಲ್ಲಿ ಸುಮಾರು ಒಂಭತ್ತು ಕೋಟಿ ರೂಪಾಯಿಗಳ ಬೋನಸ್ ಕರ್ನಾಟಕ ರಾಜ್ಯಕ್ಕೆ ಬಂದಿದೆ. ೧೯೮೬-೮೭ ರಲ್ಲಿ ರಾಜ್ಯ ಸರ್ಕಾರ ನಮಗೆ ಕೊಟ್ಟಂಥ ಗುರಿ ೧೫೦ ಕೋಟಿ ರೂಪಾಯಿಗಳು ೧೬೭ ಕೋಟಿ ರೂಪಾಯಿಗಳು ಈಗಾಗಲೇ ಬಂದಿದೆ ಇನ್ನು ೧೫ ಕೋಟಿ ರೂಪಾಯಿಗಳ ಅರಿಯರ್ಸ್ ನಮಗೆ ಕೇಂದ್ರ ಸರ್ಕಾರದಿಂದ ಬರಬೇಕಾಗಿದೆ.